ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ 8 ನೇ ತರಗತಿ ಶಿಕ್ಷಕರ ತರಬೇತಿ ವಿನ್ಯಾಸ

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ತರಬೇತಿಗೆ ಮುನ್ನ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-2005 ರ ತತ್ವಗಳು ಮತ್ತು ಆರ್ಟಿಇ 09 ರ ನೀತಿಗಳನ್ನಾಧರಿಸಿ ಕರ್ನಾಟಕದಲ್ಲಿ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಜಾರಿ ಮಾಡಲಾಗುತ್ತಿದೆ. ಈ ಮೌಲ್ಯಮಾಪನದ ಆಶಯದನ್ವಯ ಮೌಲ್ಯಮಾಪನವು ಹೆಚ್ಚುಸುಸಂಗತವೂ, ತರಗತಿ ಪ್ರಕ್ರಿಯೆಗಳೊಂದಿಗೆ ಜೋಡಿಸಲ್ಪಡುವುದೂ ಆಗುತ್ತದೆ ಶಿಕ್ಷಕರಿಗೆ ಈ ಸಾಧನವು ಸ್ವಾವಲೋಕನ ಸಾಧನವಾಗಿ ಕಲಿಕೆಯ ಸಾಧನವಾದರೆ ಮಕ್ಕಳಿಗೆ ಹಿಮ್ಮಾಹಿತಿ ನೀಡುವ ಕಲಿಕೆಯ ಸಾಧನ. ಮಗುವನ್ನು ವಿವಿಧ ಆಯಾಮಗಳಿಂದ ಅರ್ಥೈಸಿಕೊಳ್ಳಲು ಈ ಮೌಲ್ಯಮಾಪನ ಸಹಕಾರಿ. ಇದು ಶಿಶು ಕೇಂದ್ರಿತವಾಗಿದ್ದು ನಾವು ಮಕ್ಕಳಿಗೆ ಹತ್ತಿರವಾಗುವ ಪ್ರಕ್ರಿಯೆ ಎಂದು ತರಬೇತಿ ನೀಡಬೇಕು

ತಾವು ತರಬೇತಿ ನಿರ್ವಹಿಸುವಾಗ ಗಮನಿಸ ಬೇಕಾದ ಸಾಮಾನ್ಯ ಅಂಶಗಳು.

- ಸಿಸಿಇ ಸಾಹಿತ್ಯ ಹೆಚ್ಚು ದೀರ್ಘವಾಗಿದ್ದು ಇದರಲ್ಲಿ ಇರುವ ಎಲ್ಲಾ ಅಂಶಗಳನ್ನೂ ತರಬೇತಿ ಅವಧಿಯಲ್ಲಿಯೇ ನಿರ್ವಹಿಸಬೇಕೆಂದೇನೂ ಇಲ್ಲ. ಒಂದು ಅರ್ಥಪೂರ್ಣ ಚರ್ಚೆಯಾಗುವಾಗ ಅದನ್ನು ಮೊಟಕುಗೊಳಿಸಿ ಇತರೆ ವಿಷಯಕ್ಕೆ ತೆರಳುವುದು ಬೇಡ. ಇಂತಹಾ ವೇಳೆ ನಿರ್ವಹಿಸದ ವಿಷಯಗಳನ್ನು ಶಿಬಿರಾರ್ಥಿಗಳು ಓದಿಕೊಳ್ಳಲು ತಿಳಿಸಿರಿ. ಅವಕಾಶ ಸಿಕ್ಕಲ್ಲಿ ಇತರೆ ಅವಧಿಯಲ್ಲಿ ಸದರಿ ಓದಿಕೊಂಡ ವಿಷಯಗಳ ಬಗ್ಗೆ ಬೆಳಕು ಚೆಲ್ಲಿರಿ.
- ತರಬೇತಿಯು ಕ್ಯಾಸ್ಕೇಡ್ ಹಂತದಲ್ಲಿ ನಡೆಯುವುದರಿಂದ ಪ್ರತಿ ಅವಧಿಯಲ್ಲಿಯೂ ಶಿಬಿರಾರ್ಥಿಗಳು ಸ್ವತಃ ಅನುಭವ ಪಡೆಯುವಂತೆ ಅವಧಿಯನ್ನು ರೂಪಿಸಿರಿ. ಇದಕ್ಕೆ ಬ್ರೈನ್ ಸ್ಟಾರ್ಮಿಂಗ್, ಸ್ವಾವಲೋಕನ (Reflection), ಗುಂಪುಚರ್ಚೆ, ಗುಂಪು ಚಟುವಟಿಕೆ, ಸ್ವ ಯೋಜನೆ, ಶಿಬಿರಾರ್ಥಿಗಳ ಮಂಡನೆ ಉಪಯುಕ್ತ. ಉಪನ್ಯಾಸ ಪದ್ಧತಿಯನ್ನು ಆದಷ್ಟೂ ಕಡಿಮೆ ಮಾಡಿರಿ.
- ವಯಸ್ಕರಿಗೆ ತರಬೇತಿ ಕೊಡುವುದರಿಂದ ಅವರ ಕಲಿಕಾ ವಿಧಾನಗಳೂ ಭಿನ್ನ ಭಿನ್ನವಾಗಿರಬಹುದು. ಅನುಭವಿಗಳು ವಿಷಯವನ್ನು ತಮ್ಮ ಅನುಭವಗಳಿಂದ ಸ್ವೀಕರಿಸುತ್ತಾರೆ. ಅಲ್ಲದೇ ಅದರ ಪ್ರಯೋಜನದ ಕಡೆಗೆ ಗಮನ ಹರಿಸುತ್ತಾರೆ. ಆದ್ದರಿಂದ ಅವಧಿಯ ಮೊದಲೇ ಯಾವುದಾದರೂ ಪರಿಕಲ್ಪನೆಯ ಅರ್ಥ ನೀಡುವುದೋ ಅಥವ ಕಂಪ್ಯೂಟರ್ ಪ್ರಸ್ತುತಿಯೋ ಬಳಸಿ ಉಪನ್ಯಾಸ ಶುರು ಮಾಡುವುದು ಬೇಡ. ಆದಷ್ಟೂ ಅನುಭವಾತ್ಮಕವಾದ ಪದ್ಧತಿಗಳನ್ನು ಅನುಸರಿಸಿರಿ. ಶಿಬಿರಾರ್ಥಿಗಳಿಂದ ವಿಷಯ ಸಂಗ್ರಹಿಸಿ ನಂತರ ಸಾಹಿತ್ಯದ ವಿಷಯವನ್ನು ಸರಿಹೊಂದಿಸಿರಿ.

ತರಬೇತಿಯ ವೇಳಾಪಟ್ಟಿ

	6.30 **am** – 7.30 **am**	8.30 **am to** 9.00 **am Break fast**	9.00 **am** – 10.00 **am**	10.00 **am** – 11.30 **am** 1	11.30 **am to** 11.45 **am Tea Break**	11.45 **am** – 1.15 **pm** 2	1.15 **pm to** 2.00 **pm Lunch Break**	2.00 **pm** – 3.30 **pm** 3	3.30 **pm to** 3.45 **pm Tea Break**	3.45 **pm** – 5.15 **pm** 4	5.15 **pm to** 5.30 **pm Short Break**	5.30 **pm** – 7.00 **pm** 5
1 ನೇ ದಿನ			ನೋಂದಣಿ ಉದ್ಘಾಟನೆ	ಪರಸ್ಪರ ಪರಿಚಯ ಮತ್ತು ಎನ್.ಸಿ.ಎಫ್. 05 & ಸಿಸಿಇ ಬಗ್ಗೆ ಶಿಬಿರಾರ್ಥಿಗಳ ಅಭಿವ್ಯಕ್ತಿ		ಆರ್.ಟಿ.ಇ, ಎನ್.ಸಿ.ಎಫ್ ಮತ್ತು ಸಿಸಿಇ ಪರಿಚಯ ಮುಂದುವರಿಕೆ		ಆರ್.ಟಿ.ಇ, ಎನ್.ಸಿ.ಎಫ್ ಮತ್ತು ಸಿಸಿಇ ಪರಿಚಯದ ಮುಂದುವರಿಕೆ.		ರೂಪಣಾತ್ಮಕ ಮೌಲ್ಯಮಾಪನ ಪರಿಚಯ.		ರೂಪಣಾತ್ಮಕ ಮೌಲ್ಯಮಾಪನ ಪ್ರಕ್ರಿಯೆ
2 ನೇ ದಿನ	ಯೋಗ		ಶುಭ ಚಿಂತನೆ ವರದಿ ಹಿಮ್ಮಾಹಿತಿ	ಸಹ ಪಠ್ಯ ವಿಷಯಗಳಾದ ಸಂಗೀತ, ಚಿತ್ರಕಲೆ, ತೋಟಗಾರಿಕೆ, ಮರಗೆಲಸ ಮತ್ತು CCE		ಸಹ ಪಠ್ಯ ವಿಷಯಗಳು, ಭಾವನಾತ್ಮಕ ವಲಯ, ಧೋರಣೆ, ಆಸಕ್ತಿ ವಿಷಯಗಳಲ್ಲಿ ಸಿಸಿಇ ಉದಾಹರಣೆ ಸಹಿತ.		ಸಂಕಲನಾತ್ಮಕ ದಾಖಲೆ ನಿರ್ವಹಣೆ /ಪ್ರಗತಿ ಪತ್ರ. ತಮ್ಮ ವಿಷಯದಲ್ಲಿ ನಿರಂತರ ವ್ಯಾಪಕ ಮೌಲ್ಯಮಾಪನ ರೂಪಣಾತ್ಮಕ ಮೌಲ್ಯಮಾಪನ ಉದಾಹರಣೆ ಸಹಿತ.		.ತಂಡಗಳಲ್ಲಿ ಮೂರು ತಮ್ಮ ವಿಷಯದ ಒಂದೊಂದು ರೂಪಣಾತ್ಮಕ ಮೌಲ್ಯಮಾಪನಕ್ಕೆ ಒಂದೊಂದು ಉದಾಹರಣೆ (ಸಾಧನಗಳ ಸಹಿತ) ಮಂಡನೆ.		.ತಂಡಗಳಲ್ಲಿ ಮೂರು ತಮ್ಮ ವಿಷಯದ ಒಂದೊಂದು ರೂಪಣಾತ್ಮಕ ಮೌಲ್ಯಮಾಪನಕ್ಕೆ ಒಂದೊಂದು ಉದಾಹರಣೆ (ಸಾಧನಗಳ ಸಹಿತ) ಮಂಡನೆ.
3 ನೇ ದಿನ	ಯೋಗ		ಶುಭ ಚಿಂತನೆ ವರದಿ ಹಿಮ್ಮಾಹಿತಿ	.ತಂಡಗಳಲ್ಲಿ ಮೂರು ತಮ್ಮ ವಿಷಯದ ಒಂದೊಂದು ರೂಪಣಾತ್ಮಕ ಮೌಲ್ಯಮಾಪನಕ್ಕೆ ಒಂದೊಂದು ಉದಾಹರಣೆ (ಸಾಧನಗಳ ಸಹಿತ) ಮಂಡನೆ.		ಸಹಪಠ್ಯ ವಿಷಯ, ಮೌಲ್ಯ,ಮನೋಧೋರಣೆ & ದೈಹಿಕ ಶಿಕ್ಷಣದಲ್ಲಿ ರೂಪಣಾತ್ಮಕ ಮೌಲ್ಯಮಾಪನ ಕೈಗೊಳ್ಳುವ ವಿಧಾನ (ಒಂದು ಉದಾಹರಣೆಯೊಂದಿಗೆ)		ಸಿಸಿಇ ಕುರಿತಾದ ಸಾಹಿತ್ಯ ಅವಲೋಕನ ಮತ್ತು ಪ್ರಶ್ನೆಗಳು.		ಸಿಸಿಇ ಕುರಿತಾದ ಸಾಹಿತ್ಯ ಅವಲೋಕನ ಮತ್ತು ಪ್ರಶ್ನೆಗಳ ಮುಂದುವರಿಕೆ ಮತ್ತು ಮುಕ್ತಾಯ.		ಸಾಮನ್ಯ ಅಂಶಗಳ ಚರ್ಚೆ. ಮುಕ್ತಾಯ